ಮಾಡಿದೆವು. ನಾಡಿಗ ಊಟದಲ್ಲಿಯೂ ಸೊಗಸುಗಾರ; ಉದಾರಿ, ಮುಕ್ತ. ಗ್ರೀನ್ ಪಾರ್ಕ್ ಏರಿಯಾದ ನಾಡಿಗನ ಬುಕ್ ಟ್ರಸ್ಟ್ ಕಚೇರಿಯಲ್ಲಿದ್ದ ಒಂದು ಪರ್ಸನಲ್ ರೂಮೇ ದಿಲ್ಲಿಯಲ್ಲಿ ಅವನು ವಾಸಿಸುತ್ತಿದ್ದ ಕೊಠಡಿಯಾಗಿತ್ತು. ಮನೆ ಹೊಂದಲು ಎನ್‌ಬಿಟಿ ಆರ್ಥಿಕ ಅವಕಾಶ ನೀಡುತ್ತಿದ್ದರೂ ಅದನ್ನು ನಿರಾಕರಿಸಿ, ತಾನು ದಿಲ್ಲಿಗೆ ಬಂದಾಗಲೆಲ್ಲ, ಯಾವುದೋ ಗೆಸ್ಟ್ ಹೌಸ್/ಲಾಜ್ ಸಹ ಮಾಡಿಕೊಳ್ಳದೇ ತನ್ನ ಕಚೇರಿಯಲ್ಲಿ ವಿಶ್ರಾಂತಿಗೆಂದು ಕೊಡಲಾಗಿದ್ದ ಒಂದು ರೂಮಿನಲ್ಲಿಯೇ ಪುಸ್ತಕ ಓದುತ್ತ, ಬರೆಯುತ್ತ ಸಮಯ ಕಳೆಯುತ್ತಿದ್ದ. ಹೀಗಾಗಿ ನಮ್ಮಂಥ ಮಿತ್ರರು ಬಂದಾಗ ಅವನಿಗೆ ಹಬ್ಬವಾಗುತ್ತಿತ್ತು. ಅವನ ಸರ್ವೀಸಿನ ಕೊನೆಯ ದಿನಗಳಲ್ಲಿ ಮಾತ್ರ, ಸ್ವಲ್ಪ ಕಾಲ ಮಾಲತಿಯೊಂದಿಗೆ ದಿಲ್ಲಿಯಲ್ಲಿ ಒಂದು ಬಾಡಿಗೆ ಮನೆ ಮಾಡಿಕೊಂಡಿದ್ದ.

* * *

ಅವನು ತನ್ನ ಕಚೇರಿಯ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಲೇ, ಕನ್ನಡವಲ್ಲದೇ, ದಿಲ್ಲಿಯ ಹಿಂದೀ, ಉರ್ದೂ, ಪಂಜಾಬಿ ಲೇಖಕರೊಂದಿಗೂ ಸಂಪರ್ಕ ಬೆಳೆಸಿಕೊಂಡಿದ್ದ. ಒಂದೆರಡು ಸಲ ನನ್ನ ಇಷ್ಟದ ಹಿಂದೀ ಸಂಘಗಳ ಚರ್ಚಾಕೂಟಗಳಿಗೆ ಅವನೊಂದಿಗೆ ಹೋಗಿದ್ದೆ. ಹೀಗೆ ಹೋದಾಗಲೇ ನನಗೆ ಡಾ. ಗಂಗಾಪ್ರಸಾದ್ ವಿಮಲ್‌ರ ಪರಿಚಯವಾಗಿತ್ತು. ಮೊದಲು ದಿಲ್ಲಿ ವಿಶ್ವವಿದ್ಯಾಲಯದ ಹಿಂದೀ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಅವರು ಈಗ ಕೇಂದ್ರೀಯ ಹಿಂದೀ ನಿರ್ದೇಶನಾಲಯದ (ಸೆಂಟ್ರಲ್ ಹಿಂದೀ ಡೈರೆಕ್ಟರೇಟ್) ನಿರ್ದೇಶಕರಾಗಿದ್ದರು. ನಂತರದಲ್ಲಿ ವಿಮಲ್ ಅವರು ಹಿಂದಿಗೆ ಭಾಷಾಂತರಿಸಿದ್ದ ನಾಡಿಗನ 'ದಾಂಪತ್ಯಗೀತಾ' ಪರಿಷ್ಕರಿಸಿ ಕೊಟ್ಟಿದ್ದೆ (16, ಜುಲೈ 2002).

* * *

ಬೆಂಗಳೂರಿನಲ್ಲಿ ಬೇರೆ ಬೇರೆ ಬಾಡಿಗೆ ಮನೆಗಳಲ್ಲಿ ಇರುತ್ತಿದ್ದ ನಾಡಿಗ ಬಹಳ ಕಾಲದ ನಂತರ ಒಂದು ಸ್ವಂತದ ನೆಲೆ ಮಾಡಿಕೊಂಡಿದ್ದ. ಅದಕ್ಕೆ ತನ್ನ ಮಗ 'ಅಪೂರ್ವ'ನ ಹೆಸರು ಇಟ್ಟಿದ್ದ. ಬನಶಂಕರಿ 3ನೇ ಫೇಜ್‌ದಲ್ಲಿ, ಕಾಮಾಕ್ಯಾ ಟಾಕೀಜ್ ಹತ್ತಿರ ಮನೆ ಕಟ್ಟುವ ಮೊದಲೇ ಆ ಜಾಗದಲ್ಲಿ ಮರಗಳನ್ನು ನೆಟ್ಟಿದ್ದ. ಎಲ್ಲಿ ಮನೆ ಮಾಡಿಕೊಂಡಿದ್ದರೂ ಸಸಿ ನೆಡುವ ಪ್ರೀತಿಯನ್ನು ಮಾಲತಿ-ಸುಮತಿ ಇಬ್ಬರೂ ಅಕ್ಕರೆಯಿಂದ ಪಾಲಿಸುತ್ತಿದ್ದರು. ಆ ಮನೆ ಕಟ್ಟಿದಾಗಿನಿಂದ, ಬೆಂಗಳೂರಿಗೆ ಹೋದಾಗಲೆಲ್ಲ ಅವನ ತಮ್ಮನಾಗಿದ್ದ ನಾನು ಅಲ್ಲಿಯೇ ವಾಸಿಸಬೇಕೆಂದು ಆಗ್ರಹಿಸುತ್ತಿದ್ದ. ಮನೆಯಲ್ಲಿ ಮೇಲಿನ ಒಂದು ಕೊಠಡಿ ನನಗಾಗಿ ನೀಡುತ್ತಿದ್ದ. ಕೆಳಗಿನಿಂದ ಮೆಟ್ಟಿಲು ಹತ್ತುವ ಜಾಗೆಯಲ್ಲಿ ತಾನು ಓದಿ ಇಟ್ಟಿದ್ದ, ತನಗೆ ಬೇಡವಾಗಿದ್ದ, ಎಲ್ಲ ಭಾಷೆಯ ಪುಸ್ತಕಗಳನ್ನು ಪೇರಿಸಿ ಇಟ್ಟಿರುತ್ತಿದ್ದ. ಯಾರಾದರೂ ಪುಸ್ತಕ ಬೇಡಿ ಬಂದರೆ, ಅವರು ತಮ್ಮ ಇಷ್ಟದ ಯಾವುದನ್ನಾದರೂ ಆಯ್ದುಕೊಳ್ಳಲು ಮುಕ್ತ ಅವಕಾಶ ನೀಡುತ್ತಿದ್ದ. ಅವನ ಹಾಸಿಗೆಯಲ್ಲಿಯೂ ಪುಸ್ತಕ ಹರವಿರುತ್ತಿದ್ದುವು. ಮನೆಯ ಹೊರಭಾಗದಲ್ಲಿದ್ದ ಗರಾಜ್ ಭಾಗವೇ ನಾಡಿಗನ ಓದುಕೋಣೆ. ಅತಿಥಿಗಳು ಸಾಮಾನ್ಯವಾಗಿ ಅಲ್ಲಿಯೇ ಬರುತ್ತಿದ್ದರು. ಅಲ್ಲಿ ಮತ್ತು ಮನೆಯ ಒಳಭಾಗ ಎರಡೂ ಕಡೆ ಅವನ ಫೋನ್ ಸಂಪರ್ಕ ಹೊಂದಿತ್ತು. ಭೆಟ್ಟಿಗೆ ಬಂದವರಿಗೆ ಚಹ ನೀಡಿಯೇ ಕಳಿಸುವ ಪರಿಪಾಟ ಇಟ್ಟುಕೊಂಡಿದ್ದ.

* * *

ನಾನು 'ಸಂಕಲನ' ಹೆಸರಿನ ದ್ವೈಮಾಸಿಕವನ್ನು ಆರಂಭಿಸುವ ಮಾತು ಮೊದಲು ಖಚಿತವಾಗಿ ನಾಡಿಗನಿಗೆ ಹೇಳಿದೆ. ತಕ್ಷಣ ಅದಕ್ಕೆ ಒಂದು ಆಸಕ್ತಿದಾಯಕ ಲೇಖನ ಕೊಡುವೆ ಅಂದ. ಮರುದಿನ (2001 ಡಿಸೆಂಬರ್ 1) ಬೆಳಗ್ಗೆ ಏಳುವುದರೊಳಗಾಗಿ ಅವನ ಲೇಖನ ಸಿದ್ಧವಾಗಿತ್ತು. ಲಂಕೇಶ್ ಜೊತೆಗಿನ ಪತ್ರವ್ಯವಹಾರ ಕುರಿತ ಒಂದು ಆಕರ್ಷಕ ಲೇಖನ ಕೊಟ್ಟ. (ಸೆಂಟ್ರಲ್ ಕಾಲೇಜಿನಲ್ಲಿ ನಾಡಿಗ ಮೂರನೇ ಆನರ್ಸ್‌ನಲ್ಲಿದ್ದಾಗ ನಿಸಾರ್ ಎರಡನೇ ಆನರ್ಸ್‌ನಲ್ಲಿ, ಲಂಕೇಶ್ ಒಂದನೇ ಆನರ್ಸ್‌ನಲ್ಲಿದ್ದರು.) ಬಹಳ ಕಾಲದ ಹಿಂದೆ 'ಸಂಕ್ರಮಣ'ದ ಬಿಡುಗಡೆಗೆ ನೀನೇ ಬಂದಿದ್ದಿ; ಈಗ ಈ ಪತ್ರಿಕೆಯ ಬಿಡುಗಡೆಗೂ ನೀನೇ ಬರಬೇಕು ಅಂದೆ. 'ನಿನ್ನ ಯಾವ ಮಾತನ್ನು ನಾನು ಒಪ್ಪಿಲ್ಲ?' ಎನ್ನುತ್ತ ತಕ್ಷಣ ಒಪ್ಪಿದ.

'ಸಂಕಲನ'ವನ್ನು ಗದಗದಲ್ಲಿ (2002 ಜನೆವರಿ 14) ಆರಂಭಿಸಿದೆ. ಅದರಲ್ಲಿ ನಾಡಿಗ ಕೊಟ್ಟಿದ್ದ ಆ ಲೇಖನವೂ ಇದೆ. ಅದಕ್ಕಿಂತ ನಾಲ್ಕೈದು ದಿನ ಮೊದಲೇ ನಾಡಿಗ ಧಾರವಾಡಕ್ಕೆ ಬಂದಿದ್ದ. ಅಂದು ಇಬ್ಬರೂ ಕೂಡಿಯೇ ಗದಗಿಗೆ ಹೋದೆವು. ಐಎಂಎ ಹಾಲ್‌ನಲ್ಲಿ ನಡೆದ ಆ ಸಮಾರಂಭ ಗದಗ ಸಾಹಿತ್ಯ